<u>ದಿನಾಂಕಃ 24.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

**<u>ಪಾಟಿ ಸವಾಲುಃ ವಾದಿಗಳ ಪರ ಶ್ರೀ ಡಿ ಎಂ ಎಸ್ ವಕೀಲರಿಂದಃ</u>**

ನಾನು ಮತ್ತು 15, 16, 20, 23 ನೇ ಪ್ರತಿವಾದಿಗಳು ಒಂದೇ ತಂದೆಯ ಮಕ್ಕಳು ಎಂದರೆ ಸರಿ. 25 ನೇ ಪ್ರತಿವಾದಿ ನನ್ನ ಸಹೋದರಿ ಎಂದರೆ ಸರಿ. ನಾನು ಮತ್ತು ನನ್ನ ಅಣ್ಣಂದಿರು ಒಟ್ಟಾಗಿ ವ್ಯವಹಾರ ಮಾಡುತ್ತೇವೆ ಎಂದರೆ ಸರಿಯಲ್ಲ. ಕ್ರಯ ಪತ್ರ ಆಗುವ ಪೂರ್ವದಲ್ಲಿ ಕೈ ಬರವಣಿಗೆ ಪಹಣಿ, ಕೇತುವಾರು, preliminary records ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿರುತ್ತೇವೆ. LR ಟಿಪ್ಪಣಿ, ಕರ್ದಾ ಕಾಪಿ ದಾಖಲೆಯನ್ನು ಪರಿಶೀಲಿಸಿಲ್ಲ ಎಂದರೆ ಸರಿ. LR ಟಿಪ್ಪಣಿಯಲ್ಲಿ ಬಲಗೈ ಕುಂಟ ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಕೇತುವಾರು ದಾಖಲೆಯಲ್ಲಿ ಕುಂಟಮಾದನ ಮಗ ಕಾಚಕ್ಕಿಮಾದನ ಹೆಸರಿಗೆ ಖಾತೆ ಮಾಡಿದೆ ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಮೂಲ ದಾಖಲಾತಿಗಳಲ್ಲಿ ವಾದಿಯರ ಕುಟುಂಬದವರ ಹಿರಿಯರ ಹೆಸರು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಮೂಲ ದಾಖಲಾತಿಗಳ ಪರಿಚಯ ನನಗೆ ಇದೆ ಎಂದರೆ ಸರಿ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳನ್ನು ಹೊರತುಪಡಿಸಿ ನನ್ನ ಬಳಿ ಬೇರೆ

ದಾಖಲಾತಿಗಳು ಇಲ್ಲ ಎಂದರೆ ಸರಿಯಲ್ಲ. ಕಾಚಕ್ಕಿಮಾದರವರ ಹೆಸರಿನಿಂದ ಮಹದೇವಮ್ಮರವರ ಕುಟುಂಬದವರ ಹೆಸರಿಗೆ ಹೇಗೆ ಖಾತೆ ಆಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಕಾಚಕ್ಕಿಮಾದರವರಿಂದ ಮಹದೇವಮ್ಮರವರ ಕುಟುಂಬದವರಿಗೆ ಯಾವುದೇ ನೋಂದಾಯಿತ ದಾಖಲೆ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಕುಂಟಮಾದ ಎನ್ನುವವರ ಹೆಸರು ಅಲ್ಲಿ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಮೇಲ್ಕಂಡ ದಾಖಲೆಗಳನ್ನು ನಾನು ನೋಡಿದ್ದರೆ ನಾನು ಕ್ರಯ ಪತ್ರವನ್ನು ನೋಂದಣಿ ಮಾಡಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನಮಗೆ ಕ್ರಯ ಪತ್ರ ಬರೆದುಕೊಟ್ಟ ಪ್ರತಿವಾದಿ 2 ರಿಂದ 14 ರವರಿಗೆ ಯಾವುದೇ ಮಾಲಿಕತ್ವದ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ವಾದಿಯರ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ಕ್ರಯ ಪತ್ರಗಳನ್ನು ಸೃಷ್ಟಿ ಮಾಡಿಕೊಂಡು ವಾದಿಯರ ಸ್ವಾಧೀನಕ್ಕೆ ಅಡ್ಡಿಪಡಿಸುತ್ತಿದ್ದೆ ಎಂದರೆ ಸರಿಯಲ್ಲ. ನಾವು ಪ್ರತಿವಾದಿ 2 ರಿಂದ 14 ರವರ ಜೊತೆ ಸೇರಿ ಕ್ರಯ ಪತ್ರಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯರಿಗೆ ಮೋಸ ಮಾಡುವ ದುರುದ್ದೇಶದಿಂದ ಪ್ರತಿವಾದಿ 17 ರಿಂದ 29 ರವರಿಗೆ ಕ್ರಯ ಪತ್ರಗಳನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ವಾದಿಯರೇ ಮಾಲೀಕರು ಮತ್ತು ಸ್ವಾಧೀನದಾರರು ಎಂದರೆ ಸರಿಯಲ್ಲ. ವಾದಿಯರು ಕಾಚಕ್ಕಿಮಾದನ ವಾರಸುದಾರರು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 2 ರಿಂದ 14 ರವರಿಗೆ ಯಾವುದೇ ಹಕ್ಕು ಬಾಧ್ಯತೆ ಇಲ್ಲದೇ ಇರುವುದರಿಂದ ನಮಗೂ ಹಕ್ಕು ಮತ್ತು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ಮೋಸ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಗಳು ಸೃಷ್ಟಿ ಮಾಡಿದ ದಾಖಲೆಗಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಚಾಮರಾಜನಗರ.